Annual Status of Education Report
असर ASER 2016 RURAL
Facilitated by PRATHAM

# ಓದುವ ಪರೀಕ್ಷೆ –1

ನಮೂನೆ – 1

## ಕಥೆ

ಆಮೆ ಮತ್ತು ಮೊಲ ಒಳ್ಳೆಯ ಸ್ನೇಹಿತರು. ಒಂದು ದಿನ ಆಮೆ ಮತ್ತು ಮೊಲ ಸ್ಪರ್ಧೆ ಏರ್ಪಾಟು ಮಾಡಿಕೊಂಡವು. ಯಾರು ಮೊದಲು ಪಕ್ಕದ ಊರನ್ನು ತಲುಪುವವರೋ ಅವರಿಗೆ ಬಹುಮಾನ ಎಂದು ಘೋಷಿಸಿದವು. ಮೊಲ ಓಡುತ್ತಾ ಮುಂದೆ ಸಾಗಿತು. ಅರ್ಧ ಸಾಗಿದ ಮೇಲೆ ಮೊಲ ವಿಶ್ರಾಂತಿ ಪಡೆಯಲು ಬಯಸಿತು. ಅಲ್ಲೇ ಮರದ ಕೆಳಗೆ ನಿದ್ರೆ ಮಾಡಿತು. ಅಷ್ಟರಲ್ಲೇ ಆಮೆ ಬೇಗನೇ ಸಾಗಿ ಊರನ್ನು ತ'ಲುಪಿತು. ಸ್ಪರ್ಧೆಯಲ್ಲಿ ಆಮೆ ಜಯಿಸಿದಾಗ ಮೊಲ ಸಪ್ಪೆ ಮೋರೆ ಮಾಡಿ ಕುಳಿತುಕೊಂಡಿತು.

## ಪ್ಯಾರಾ

ಕಮಲೆಗೆ ಗುಲಾಬಿ ಹೂವು ಅಂದರೆ ಬಹಳ ಇಷ್ಟ. ಇದು ನೋಡಲು ಬಹಳ ಅಂದ. ಕಮಲೆಯ ಮನೆಯ ಅಂಗಳದಲ್ಲಿ ಬಣ್ಣ ಬಣ್ಣದ ಗುಲಾಬಿ ಹೂವುಗಳ ಅಂದವಾದ ತೋಟವಿದೆ.

## ಪ್ಯಾರಾ

ಪುಟ್ಟು ಶಾಲೆಯಿಂದ ಮನೆಗೆ ಸೈಕಲ್‌ನಲ್ಲಿ ಬಂದ. ಮನೆಗೆ ಬಂದ ನಂತರ ತಾಯಿ ತಿನ್ನಲು ಬಿಸಿಯಾದ ರೊಟ್ಟಿ ಮತ್ತು ಹಾಲು ಕೊಟ್ಟಳು. ಪುಟ್ಟು ರೊಟ್ಟಿಯನ್ನು ತಿಂದು ಹಾಲನ್ನು ಕುಡಿದ. ನಂತರ ಗೆಳೆಯನೊಂದಿಗೆ ಆಟ ಆಡಲು ಹೊರಟ.

## ಓದುವ ಪರೀಕ್ಷೆ- 1

ನಮೂನೆ – 1

**ಅಕ್ಷರ**

ಎ ಖ ಐ

ಥ ಪ

ದ ರ ಬ

ಒ ಡ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

**ಪದ**

ಕೊಡ ಭರ

ಮಳೆ

ನಾರು ಭಯ

ದಾರಿ

ಚಾಟಿ ಛಡಿ

ದೇವ ದೂರು

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

Annual Status of Education Report
असर ASER 2016 RURAL
Facilitated by PRATHAM

# ಓದುವ ಪರೀಕ್ಷೆ –2



## ಕಥೆ

ವಿಮಲ ಕರಿಯನ ತಂಗಿ. ವಿಮಲೆಗೆ ಕುದುರೆ ಕಂಡರೆ ಒಲವು. ಕರಿಯನಿಗೆ ಕೋತಿ ಕಂಡರೆ ಇಷ್ಟ. ವಿಮಲ ಮತ್ತು ಕರಿಯ ನೀರು ತರಲು ಕುದುರೆ ಮತ್ತು ಕೋತಿಯ ಜೊತೆಗೆ ನೀರಿನ ಕೊಳಕ್ಕೆ ಹೋದರು. ಕೊಳದಿಂದ ನೀರನ್ನು ತಂದು ಕೈಕಾಲು ಮುಖ ತೊಳೆದರು. ಕೋತಿ ಸಂತೋಷದಿಂದ ಲಾಗ ಹಾಕಿ ಕುಣಿಯಿತು. ಕುದುರೆ ಆನಂದದಿಂದ ಕೆನೆಯಿತು. ತಾಯಿ ಹಾಲು ಕುಡಿಯಲು ಕೂಗಿದಳು. ವಿಮಲ ಮತ್ತು ಕರಿಯ ಹಾಲು ಕುಡಿದರು. ಆಗ ನಾಯಿ ಬೌಬೌ ಎಂದು ಬೊಗಳಿತು. ಅಮ್ಮ ನಾಯಿಗೂ ಕುಡಿಯಲು ಹಾಲು ನೀಡಿದಳು. ನಂತರ ಇಬ್ಬರೂ ಆಟ ಆಡಲು ಹೊರಗೆ ಹೊರಟರು.

## ಪ್ಯಾರಾ

ನಮ್ಮ ಊರ ಶಾಲೆ ತುಂಬಾ ಸುಂದರವಾಗಿದೆ. ಶಾಲೆಯ ಮುಂದೆ ಸುಂದರ ಹೂವಿನ ತೋಟವಿದೆ. ಹೂವಿನ ಗಿಡಗಳಿಗೆ ನಾವು ನೀರು ಹಾಕುತ್ತೇವೆ. ಶಾಲೆಯ ಹೂವಿನ ತೋಟದಲ್ಲಿ ಬಗೆ ಬಗೆಯ ಹೂಗಳಿವೆ.

## ಪ್ಯಾರಾ

ವಿನಯ ಶಾಲೆಯಿಂದ ಮನೆಗೆ ಬಂದ. ತಾಯಿ ತಿನ್ನಲು ಬಾಳೆಹಣ್ಣು, ಚಕ್ಕುಲಿ, ಕುಡಿಯಲು ಹಾಲನ್ನು ಕೊಟ್ಟಳು. ಅವನು ಹಣ್ಣು ತಿಂದು, ಹಾಲು ಕುಡಿದು ಆಡಲು ಹೋದನು. ಆಟದಿಂದ ಬಂದ ನಂತರ ಕೈ ಕಾಲು ಮುಖ ತೊಳೆದು ಪಾಠ ಓದಲು ಕುಳಿತನು.

Annual Status of Education Report
ASER 2016 RURAL
Facilitated by PRATHAM

# ಓದುವ ಪರೀಕ್ಷೆ -2

ನಮೂನೆ - 2

## ಅಕ್ಷರ

ಟ ಸ ಉ

ಇ ಧ

ಎ ಅ ಳ

ಘ ವ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

## ಪದ

ಓಟ ಕಾಗೆ

ಮೊಲ

ಭೇದ ಬರ

ಗರಿ

ನೀಳ ಕಪಿ

ದೋಣಿ ದೀಪ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

# ಓದುವ ಪರೀಕ್ಷೆ –3



## ಕಥೆ

ಒಂದು ಊರಿನಲ್ಲಿ ಒಂದು ಆನೆ ಇತ್ತು. ಆ ಆನೆಗೆ ಗುಬ್ಬಿ, ನಾಯಿ ಹಾಗೂ ರಮೇಶ ಎಂಬ ಗೆಳೆಯರಿದ್ದರು. ಆನೆಯನ್ನು ಕಂಡರೆ ಗುಬ್ಬಿ, ನಾಯಿ ಹಾಗೂ ರಮೇಶನಿಗೆ ಬಹಳ ಇಷ್ಟ. ಒಂದು ದಿನ ಕಳ್ಳರು ಆ ಊರಿಗೆ ಬಂದು ಆನೆಯನ್ನು ಮರಕ್ಕೆ ಕಟ್ಟಿ ಹಾಕಿ ಅದರ ದಂತವನ್ನು ತೆಗೆಯಲು ಪ್ರಯತ್ನಿಸಿದರು. ಅದೇ ಮರದ ಮೇಲೆ ಆನೆಯ ಗೆಳೆಯ ಗುಬ್ಬಿ ಕುಳಿತಿತ್ತು. ಆನೆಗೆ ಆದ ಪಾಡನ್ನು ನೋಡಿ ಗುಬ್ಬಿ ಹಾರಿ ಹೋಗಿ ನಾಯಿ ಮತ್ತು ರಮೇಶನಿಗೆ ಹೇಳಿತು. ಆಗ ರಮೇಶ ಅವನ ಜೊತೆ ಊರಿನ ಜನರನ್ನು ಕರೆದುಕೊಂಡು ಓಡಿ ಬಂದ. ಊರ ಜನರು ಕಳ್ಳರನ್ನು ಹಿಡಿದರು. ಆನೆಯನ್ನು ಬಿಡಿಸಿದರು.

## ಪ್ಯಾರಾ

ರಂಗಪ್ಪ ಕಟ್ಟಿಗೆ ಕಡಿದು ಜೀವನ ನಡೆಸುತ್ತಿದ್ದ. ಒಂದು ದಿನ ರಂಗಪ್ಪ ಕೊಳದ ಬಳಿ ಒಣಗಿದ ಮರ ಕಂಡ. ಅದನ್ನು ಕಡಿದು ಮಾರಬೇಕೆಂದುಕೊಂಡ. ಕೈಯಿಂದ ಕೊಡಲಿ ಜಾರಿ ಕೊಳದಲ್ಲಿ ಬಿತ್ತು.

## ಪ್ಯಾರಾ

ಮಳೆಗಾಲದ ಸಮಯದಲ್ಲಿ, ಎಲ್ಲೆಲ್ಲೂ ಜೋರು ಮಳೆ. ಜೋರು ಮಳೆ ಬಂದ ಕಾರಣ ಎಲ್ಲ ಕಡೆಗೂ ನೀರು ನಿಂತಿತ್ತು. ಎಲ್ಲಾ ಮಕ್ಕಳು ಸೇರಿ ಸಂತೋಷದಿಂದ ನೀರಿನಲ್ಲಿ ಆಟ ಆಡುತ್ತಾ ಕುಣಿದಾಡಿದರು.

Annual Status of Education Report
असर ASER 2016 RURAL
Facilitated by PRATHAM

# ಓದುವ ಪರೀಕ್ಷೆ -3

ನಮೂನೆ - 3

**ಅಕ್ಷರ**

ಚ ಪ ಣ

ಏ ತ

ರ ಜ ಠ

ಬ ಕ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

**ಪದ**

ವರ ನದಿ

ಪೇಟೆ

ಜಲ ಮಾವು

ಸವಿ

ಕಳೆ ತೋಟ

ಹೊಲ ನೀರು

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

Annual Status of Education Report
असर ASER 2016 RURAL
Facilitated by PRATHAM

# ಓದುವ ಪರೀಕ್ಷೆ –4

ನಮೂನೆ – 4

## ಕಥೆ

ಒಂದು ಕಾಡಿನ ಹಳೆಯದಾದ ಗುಹೆಯಲ್ಲಿ ಸಿಂಹ ವಾಸವಾಗಿತ್ತು. ಅದರ ಬಳಿ ಇಲಿಯೊಂದು ಬಂದಿತು. ಸಿಂಹ ಇಲಿಯನ್ನು ಕೊಲ್ಲಲು ಮುಂದೆ ಬಂದಿತು. ಆದರೆ ಇಲಿ ನನ್ನನ್ನು ಕೊಲ್ಲಬೇಡ ಎಂದು ವಿನಂತಿಸಿತು. ಮುಂದೆ ಎಂದಾದರೂ ನಿನಗೆ ಸಹಾಯ ಮಾಡುತ್ತೇನೆ ಎಂದು ಹೇಳಿತು. ಕೆಲ ದಿನಗಳ ನಂತರ ಬೇಟೆಗಾರನ ಬಲೆಯಲ್ಲಿ ಸಿಂಹ ಸಿಕ್ಕಿಬಿದ್ದಿತು. ಆಗ ಇಲಿ ಬಂದು ತನ್ನ ಹಲ್ಲಿನಿಂದ ಬಲೆಯನ್ನು ಕತ್ತರಿಸಿ ಸಿಂಹವನ್ನು ಅಪಾಯದಿಂದ ಪಾರು ಮಾಡಿತು.

## ಪ್ಯಾರಾ

ರಂಗ ದನ ಕಾಯುತ್ತಿದ್ದ. ಅವನಿಗೆ ಓದಬೇಕೆಂದು ಬಹಳ ಆಸೆ ಇತ್ತು. ಆ ಆಸೆಯನ್ನು ರಂಗನು ಅವನ ಅಣ್ಣನಿಗೆ ತಿಳಿಸಿದನು. ಅವನ ಅಣ್ಣ ಅವನಿಗೆ ಪಕ್ಕದ ಊರಿನ ಶಾಲೆಗೆ ಸೇರಿಸಿದನು.ರಂಗನು ಸಂತೋಷದಿಂದ ಶಾಲೆಗೆ ಹೊರಟನು.

## ಪ್ಯಾರಾ

ಸರಸ ಮತ್ತು ಕಮಲ ಗೆಳೆಯರ ಹಾಕಿ ಆಟ ನೋಡಲು ಹೋದರು. ಗೆಳೆಯರು ಹಾಕಿ ಆಟದಲ್ಲಿ ಗೆದ್ದರು. ಇವರಿಗೆ ತುಂಬಾ ಸಂತೋಷವಾಯಿತು. ಮುಂದಿನ ಬಾರಿಯೂ ಆಟದಲ್ಲಿ ಗೆಲ್ಲಬೇಕೆಂದು ಗೆಳೆಯರಿಗೆ ಹೇಳಿ ಹೊರಟರು.

## ಓದುವ ಪರೀಕ್ಷೆ-4

ನಮೂನೆ – 4

### ಅಕ್ಷರ

ಬ ನ ಅ

ಸ ಆ

ಗ ಜ ರ

ವ ಮ

5 ಅಕ್ಷರಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.

### ಪದ

ಸರ ಅರ

ಮಜ

ಮನೆ ಶಾಲೆ

ವಾರ

ದನ ಕಿವಿ

ಮಾವು ರಾಣಿ

5 ಪದಗಳನ್ನು ಕೇಳಿ ಅವುಗಳಲ್ಲಿ 4 ಸರಿಯಾಗಿರಬೇಕು.